Vidyagiri DHARWAD

09

## ದ ಕಾದಂಬರಿಗಳಲ್ಲಿ ರೈತ ಹೋರಾಟ

• ಪ್ರೊ. ಈರಣ್ಣ ಎಸ್. ಹಳ್ಳಿಕೇರಿ

ರಿಮನೆ ಶ್ಯಾಮರಾವ್ ರವರು ಬರೆದ ಪಶ್ಚಿಮ ತಪ್ಪಲಿನಲ್ಲಿ ಇದು ಸಂಯುಕ್ತ ಕರ್ನಾಟಕ ಕೆಯಲ್ಲಿ ಧಾರವಾಹಿಗಾಗಿ ಪ್ರಕಟವಾದ ಕಾದಂಬರಿ, ಣಿಕನಾದ ಸಾಮಾನ್ಯ ರೈತನೊಬ್ಬ ಆತ್ಮಹತ್ಯೆ ೊಳ್ಳುವಂತ ದುರದೃಷ್ಟಕರ ಸನ್ನಿವೇಶ ಯಾಕೆ ಣವಾಗುತ್ತವೆ ಎನ್ನುವುದರ ಮೇಲೆ ಈ ಕಾದಂಬರಿ ಚೆಲ್ಲುತ್ತದೆ.

ವ್ವಾ ನಮ್ಮ ಕಪ್ಪೊಳೆಗೆ ಡ್ಯಾಂ ಕಟ್ತಾರಂತೆ ಕಟ್ಟಿ ಕರೆಂಟ ತಗಿತಾರಂತೆ ನಾವೆಲ್ಲ ವರ್ಷಾ ಪೂಜೆ ವಲ್ಲಾ ಅದೇ ಜಾಗದಲ್ಲಿ ಈಗ ನಮ್ಮೂರ್ಗೆ ರಸ್ತೆ, ಎರಡು ಬಂದಂಗಾಯ್ತು. ಈ ಜನ್ಮದಲ್ಲಿ ಈ ಕರೆಂಟ ಬರೋದಿಲ್ಲ ಅಂತಿದ್ಯಲ್ಲ ಈಗ ಮಗ ರಾಜು ತಾಯಿಗೆ ಹೇಳಿದ ಇಲ್ಲಿಂದ ಕಾದಂಬರಿ ಭವಾಗುತ್ತದೆ.

ಶ್ಚಿಮ ಘಟ್ಟಗಳ ತಪ್ಪಲಿನಲ್ಲ ಕಾಡಿನಲ್ಲಿ ಬೆಳೆದ ದ್ದರಿಂದ ಎಲ್ಲರು ಇದನ್ನು ಕಾಡಳ್ಳಿ ಎಂದು ಕರೆಯ ದರು. ಈ ಹಳ್ಳಿಯಿಂದ ನಾಲ್ಕೈದು ಕಿ.ಮೀ. ಲ್ಲಿ ಹರಿಯುವ ಹಳ್ಳವೆ ಕಪ್ಪು ಹೊಳೆ ಈ ಹೊಳೆಗೆ ಡ್ಯಾಂ ಕಟ್ಟಿಸಲು ಸರಕಾರದಿಂದ ಮಂಜೂರಾತಿ ಉತ್ತಾರೆ.

ಈ ಕಾಡಳ್ಳಿಯಲ್ಲಿ ಬೊಮ್ಮೆಗೌಡ್ರು ಅವರ ಮಕ್ಕಳು ಪ್ಪ, ಕಾಳಪ್ಪ ಯಶೋಧರ ಅಂಗಡಿ ಶೆಟ್ಟರು ಸಿದ್ದ ಪ್ಪ ಹೀಗೆ ನೂರಾರು ಕುಟುಂಬಗಳು ವಾಸಿಸುತ್ತವೆ. ನಮ್ಮ ಕಾದಂಬರಿ ನಾಯಕ ಶ್ರಮಜೀವಿ ರೈತ ಮರಿಯಪ್ಪಾ ಆತನಿಗೆ ಮೂರು ಎಕರೆ ಒಣಭೂಮಿ, ಎಕರೆ ರಬ್ಬರ ಕಾಫಿ ತೋಟ ರಸ್ತೆ ಹತ್ತಿರ ಹಂಚಿನ ನಾಲೆಂಟು ಹಾಲು ಕೊಡುವ ಹಸು. ಎರಡು ಎತ್ತುಗಳು, ಹೆಂಡತಿ ಚಿಕ್ಕವ್ವ ಮಗ ಭೀಮರಾಜು ಇಬ್ಬರು ಹೆಣ್ಣು ಮಕ್ಕಳಾದ ನೀಲಾಕ್ಷಿ ಮತ್ತು ಲೋಲಾಕ್ಷಿ ಇವೇ ಮರಿಯಪ್ಪನ ಆಸ್ತಿ ಮತ್ತು ಸಂಸಾರ. ಜೀವನಕ್ಕೆ ತೊಂದರೆ ಇಲ್ಲದಂತೆ ಸಂಸಾರ ಸಾಗುತ್ತಿದೆ. ಭೀಮರಾಜು ಎಸ್.ಎಸ್.ಎಲ್.ಸಿ ಪಾಸಾಗದೆ ತಂದೆಗೆ ಹೊಲದಲ್ಲಿ ಸಹಾಯ ಮಾಡುತ್ತಿದ್ದಾನೆ.

ಒಂದು ದಿನ ಕಾಡಳ್ಳಿಯ ಯಜಮಾನರಂತಿರುವ ಬೊಮ್ಮಗೌಡರ ಮನೆಯಿಂದ ಕರೆ ಬಂತು ಯಾರೇ ಸರಕಾರಿ ಅಧಿಕಾರಿಗಳು ಬಂದರೂ ಮೊದಲು ಅವರ ಮನೆಗೆ ಭೇಟಿಕೊಡುವುದು. ಈಗಲೂ, ಹಾಗೆ ಗಿರಿಯೂರಿನ ಪಂಚಾಯತ್ ಸೆಕ್ರಟರಿ, ಈಶ್ವರಪುರದ ತಹಶೀಲ್ದಾರ, ಸರ್ವೆ ಎಂಜನೀಯರ ಎಲ್ಲಾ ಇದ್ದರು. ಜಮೀನು ಕಳೆದುಕೊಳ್ಳಲಿರುವ ಕಾಡಳ್ಳಿಯ ನೂರಾರು ಜನ ಆಗಲೇ ಅಲ್ಲಿ ಬಂದು ಕುಳಿತಿದ್ದರು. ಮರಿಯಪ್ಪನವರೇ ನಿಮ್ಮ ಕಪ್ಪು ಹೊಳೆಗೆ ಡ್ಯಾಂ ಕಟ್ತಾ ಇದೀವಿ, ಗೊತ್ತಲ್ಲಾ ನಿಮಗೆಲ್ಲಾ ಕರೆಂಟು, ನೀರು, ರಸ್ತೆ ಎಲ್ಲಾ ಆಗುತ್ತದೆ, ಊರು ಬೆಳೆಯುತ್ತೆ, ಇದು ದೊಡ್ಡ ಕೆಲಸ. ಹೀಗೆ ಮಾಡುವಾಗ ಹಲವು ಜನರಿಗೆ ತೊಂದರೆಯಾಗುತ್ತೆ. ನಿಮ್ಮದು ಒಣ ಜಮೀನು, ಮುಳುಗಡೆ ಯಾಗುತ್ತದೆ. ಅದಕ್ಕೆ ನಿಮಗೆಲ್ಲಾ ಪರಿಹಾರ ಕೋಡ್ತಿವಿ. ಜೊತೆಗೆ ಬೇರೆ ಕಡೆ ಒಳ್ಳೆ ಜಮೀನೂ ಕೊಡ್ತೀವಿ. ನಿಮಗೆಲ್ಲಾ ಎರಡೂ ಕಡೆ ಲಾಭ ಬರುತ್ತದೆ ಎಂದು ತಹಶೀಲ್ದಾರರು ಹೇಳಿದಾಗ ಮರಿಯಪ್ಪ, ಗೌಡ್ರದೂ ನಂದೂ ಒಂದೇ ಕಡೆ ಜಮೀನು ಇರೋದು ಅವ್ರಿಗೆ ಹೆಗಾಗುತ್ತೋ ನನಗೂ ಹಾಗೆ ಆಗಲೆಂದು ಸುಮ್ಮನಾಗುತ್ತಾನೆ. ಹೀಗೆ ರೈತರು ಡ್ಯಾಮಿಗಾಗಿ ತಮ್ಮ ಜಮೀನು ಕಳೆದುಕೊಳ್ಳುವುದರೊಂದಿಗೆ, ಕಾದಂಬರಿ ಪ್ರಾರಂಭಗೊಳ್ಳುತ್ತದೆ.

ಕಾಡಳ್ಳಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ವಿದ್ಯುತ್ ಬೇಕು, ಅದಕ್ಕೆ ಸರಕಾರ ಯೋಜನೆಗಳನ್ನು ಹಾಕಿಕೊಂಡು ವಿದ್ಯುತ್ ಉತ್ಪಾದನೆ ಮಾರ್ಗವನ್ನು ಹುಡುಕಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದರೆ, ಚಿನ್ನದ ಮೊಟ್ಟೆ ಇಡುತ್ತದೆ ಎಂದು ಕೋಳಿಯನ್ನೇ ಕಿತ್ತೆನಿಸಿದರೆ ಪಶ್ಚಿಮ ಘಟ್ಟಗಳಲ್ಲಿ ಈಗ ಆಗುತ್ತಿರುವುದು ಅದೇ. ಈ ಪ್ರದೇಶ ಇಡೀ ಬಯಲುಸೀಮೆಗಳಿಗೆ ಮಳೆ ಉತ್ಪತ್ತಿಯಾಗುವ ಕನ್ಯಾಕುಮಾರಿಯಿಂದ ಗುಜರಾತವರೆಗೆ ಹರಡಿದ ೧೫೦೦ ಕಿ.ಮೀ. ಉದ್ದದ ಪಶ್ಚಿಮ ಘಟ್ಟಗಳು ಈಗ ಕಪ್ಪು ಹೊಳೆಗೆ ಡ್ಯಾಂ ಕಟ್ಟಲು ಎರಡು ಸಾವೀರ ಎಕರೆ ಪ್ರದೇಶ ಅರಣ್ಯ, ಹೊಲಗಳು ನೀರಿನಲ್ಲಿ ಮುಳಗಡೆಯಾಗಲಿವೆ. ಇಂತಹ ನೂರಾರು ಯೋಜನೆಗಳು ಇನ್ನೂ ಜಾರಿಗೆ ಬರುತ್ತಿವೆ. ಆದ್ದರಿಂದ, ಡ್ಯಾಂ ಕಟ್ಟುವುದನ್ನು ನಿಲ್ಲಿಸಬೇಕೆಂದು ಅದಕ್ಕಾಗಿ ನಾವು ಹೋರಾಡುತ್ತಿದ್ದೇವೆ. ರೈತನಾದ ನಾವು ನಮ್ಮ ಜೊತೆಗಾರಬೇಕೆಂದು ಪರಿಸರವಾದಿಗಳಾದ ಉಮೇಶ ಹೆಗಡೆ ಅವರು ರೈತರಲ್ಲಿ ಕೇಳಿಕೊಳ್ಳುತ್ತಾರೆ. ಎಲ್ಲ ರೈತರ ಪರಿಸರವಾದಿಗಳ ಹೋರಾಟದ ನಡುವೆಯೆ ನಂತರವೂ ಡ್ಯಾಂ ಕಟ್ಟುವ ಕೆಲಸ ಪ್ರಾರಂಭವಾಗುತ್ತದೆ. ಒಣಬೇಸಾಯದ ಭೂಮಿಗೆ ಒಂದು ಎಕರೆಗೆ ಮೂವತ್ತು ಸಾವೀರ, ತೋಟಕ್ಕೆ ೫೦ ಸಾವೀರ ಎಂದು ಸರಕಾರದವರು ಬೆಲೆ ಕಟ್ಟಿದಾಗ, ಎಲ್ಲರೂ ಹೆದರಿಕೊಳ್ಳುತ್ತಾರೆ. ಇನ್ನೂ ಬೇರೆ ಕಡೆ ಜಮೀನು ಎಂದು ಕೇಳಿದಾಗ ಕೊಡ್ತಿವಿ, ಈಗಲ್ಲ ಅದಕ್ಕೂ ಪ್ರೋಸಿಜರ್ ಇದೆ ಎನ್ನುತ್ತಾರೆ ಅಧಿಕಾರಿಗಳು. ಪರಿಹಾರದ ಹಣ ಕಡಿಮೆಯಾಗಿದೆ ಅಲ್ಲದೆ ಹಣ ಕೊಡದೆ ಡ್ಯಾಮಿನ ಕೆಲಸ ಪ್ರಾರಂಭಿಸಿದ್ದಾರೆ. ಆದ್ದರಿಂದ, ಕೆಲಸವನ್ನು ನಿಲ್ಲಿಸಬೇಕೆಂದು ರೈತರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದು ನಂತರ ಎಕರೆಗೆ ೫೦ ಸಾವೀರ ರೂ. ರಂತೆ ಪರಿಹಾರ ದನ ಪಡೆಯುತ್ತಾರೆ.

ಇತ್ತ ಮರಿಯಪ್ಪನ ಹಿರಿಯ ಮಗಳಾದ ನೀಲಾಕ್ಷಿಯ ಮದುವೆ ನಿಶ್ವಯವಾಗಿತ್ತು. ಮದುವೆಗೆ ಹಣ ಹೊಂದಿಸಲು ಮರಿಯಪ್ಪ ಊರಿನ ಬೊಮ್ಮೇಗೌಡರ ಹತ್ತಿರ ಬೇಡಿಕೊಳ್ಳುತ್ತಾನೆ. ಅವರು ಕೊಡದೇ ಹೋದಾಗ, ಬಡ್ಡಿ ವ್ಯಾಪಾರಿ ಲಿಂಗಣ್ಣ ಶೆಟ್ಟರ ಹತ್ತಿರ ಹೋಗಿ, ತೋಟದ [illegible] ಕೊಟ್ಟು, ಬಡ್ಡಿಯಂತೆ ಹಣವನ್ನು ತರುತ್ತಾನೆ. [illegible] ಹಣದಿಂದ ನೀಲಾಕ್ಷಿಯ ಮದುವೆ ಮುಗಿದು ಹೋಗುತ್ತದೆ.

ಡ್ಯಾಮಿನ ಕಂಟ್ರಾಕ್ಟರ್ ತಂಗವೇಲು ಡ್ಯಾಂನ ಕೆಲಸವನ್ನು ಜೋರಾಗಿ ಮಾಡುತ್ತಿದ್ದರು, ಜೋತೆಗೆ ಊರಿನ ಕಪ್ಪಳಿಯೆ ಯುವಕರನ್ನು ಸೇರಿಸಿಕೊಂಡು ಅವರಿಂದ ರಾತ್ರಿ ಹೊತ್ತಿನಲ್ಲಿ ಕಳ್ಳಬಟ್ಟಿ ಶೇರೆ ತಯಾರಿಸುವುದು. ಪ್ರಾಣಿ ಪಕ್ಷಿಗಳನ್ನು ಕೊಲ್ಲಿಸುವುದನ್ನ ಮಾಡುತ್ತಿದ್ದನು ಇದರಲ್ಲಿ ಮರಿಯಪ್ಪನ ಮಗ ಭೀಮರಾಜ ಬಾಗಿಯಾಗಿದ್ದನು. ಈ ವಿಷಯ ಪತ್ರಿಕೆಯಲ್ಲಿ ಬಂದು ಭೀಮರಾಜು ಮುಂತಾದ ಯುವಕರು ಜೈಲಿಗೆ ಹೋಗಬೇಕಾಯಿತು. ಮರಿಯಪ್ಪ ತನ್ನ ಮಗ ಜೈಲಿಗೆ ಹೊದುದ್ದನ್ನು ಕಂಡು ಪರಿತಪಿಸಿ, ಲಾಯರ ಮುಖಾಂತರ ಅವನನ್ನು ಜೈಲಿನಿಂದ ಬಿಡಿಸಿಕೊಂಡು ಬರಬೇಕಾಯಿತು.

ಮರಿಯಪ್ಪನಿಗೂ ಜಮೀನು ಮುಳುಗಡೆ ಪರಿಹಾರದ ಚೆಕ್ಕು ಬಂತು ಈ ಸಲ ಎಕರೆಗೆ ೫೦ ಸಾವಿರದಂತೆ ಒಂದೂವರೆ ಲಕ್ಷದ ಚೆಕ್ಕು ಬಂತು. ಮರಿಯಪ್ಪ ತನ್ನ ಸಾಲ ತೀರಿಸಲು ಲಿಂಗಪ್ಪ ಶೆಟ್ಟರ ಮನೆಗೆ ಹೋದನು. ಶೆಟ್ಟರು ಪುಸ್ತಕ ತೆಗೆದು ಬಡ್ಡಿ ಬಹಳ ಆಗಿದೆ ಎನ್ನುತ್ತಾ ೩೦ ಸಾವಿರ ಅಸಲಿಗೆ ೬ ತಿಂಗಳಿಗೆ ೪೬ ಸಾವಿರ ಬಡ್ಡಿ ಸೇರಿಸಿದ್ದರು. ಅಷ್ಟು ಬಡ್ಡಿ ಹೇಗಾಯಿತು ? ಎಂದಾಗ ಶೆಟ್ಟರು ನಾವು ವರ್ಷಕ್ಕೆ ತಿಂಗಳಕ್ಕೆ ಬಡ್ಡಿ ಲೆಕ್ಕ ಹಾಕೊದಿಲ್ಲ ವಾರಕ್ಕೆ ಬಡ್ಡಿ ಲೆಕ್ಕ ಹಾಕುತ್ತೇವೆ ಎನ್ನುತ್ತಾರೆ. ಕೊನೆಗೆ ಮರಿಯಪ್ಪ ೭೦ ಸಾವಿರ ಎಣಿಸಿ ತೋಟದ ಪತ್ರ ತಂದನು.

ಇನ್ನು ಉಳಿದ ಎಪ್ಪತ್ತೈದು ಸಾವಿರ ಹಣದಲ್ಲಿ ಎರಡೆಕೆರೆ ಗದ್ದೆ ಕೊಳ್ಳುದೆ ಹೇಗೆ ಏನಾದರಾಗಲಿ ಇರುವ ಹಣ ಕೊಟ್ಟು ಅಗ್ರಿಮೆಂಟು ಮಾಡಿ ಕೊಳ್ಳುವುದು. ಮತ್ತು ಕಾಫಿ ಬೆಳೆ ಬಂದ ಮೇಲೆ ಉಳಿದ ಹಣ ಕೊಟ್ಟರಾಯಿತೆಂದು ಗಿಡ್ಡೇ ಗೌಡನ ಮನೆಗೆ ಹೋಗುತ್ತಾನೆ. ಎಕರೆಗೆ ೫೫ ಸಾವಿರ ಎಂದು ಒಪ್ಪಿ ೫ ಸಾವಿರ ಸಂಚಗಾರ ತೆಗೆದುಕೊಂಡಿದ್ದ ಗಿಡ್ಡೇಗೌಡ ಈಗ ಎಕರೆಗೆ ಎಂಭತ್ತು ಸಾವಿರ ಎನ್ನುತ್ತಾನೆ, ಕೊನೆಗೆ ಮರಿಯಪ್ಪ ಹೊಲ ಖರೀದಿಸಲಾರದೆ ಮನೆಗೆ ಮರಳುತ್ತಾನೆ, ಇತ್ತ ಹೊಲವೂ ಖರೀದಿಸಿಲಿಲ್ಲ ಅತ್ತ ಹಣವೂ ಖರ್ಚಾಗುತ್ತ ಹೋಯಿತು.

ಸರಕಾರದವರು ಮುಳಗಡೆಯಾದ ಹೊಲಕ್ಕೆ ಬದಲಾಗಿ ದೂರದ ಗುಡ್ಡದ ಮೇಲಿನ ಜಮೀನನ್ನ ರೈತರಿಗೆ ಕೊಡುತ್ತಾರೆ ಅದು ಯಾವುದಕ್ಕೆ ಉಪಯೋಗಕ್ಕೆ ಬರುವುದಿಲ್ಲ ಬೆಳೆಗಳು ಬೆಳೆಯಲಾರವು.

ಮರಿಯಪ್ಪನು ಕೊನೆಯ ಮಗಳು ಲೋಲಾಕ್ಷಿ ದನ ಕಾಯಲು ಕಂಟ್ರಾಕ್ಟರ ತಂಗವೇಲುನ ಡ್ರೈವರ್ ವೆಲನ ಕಣ್ಣಿಗೆ ಬಿದು ಅತ್ಯಚಾರಕೊಳ್ಳಗಾಗಿ ಸತ್ತು ಹೋಗುತ್ತಾಳೆ.

PRINCIPAL
J.S.S. Banashankari Arts, Commerce &
Shantikumar Gubbi Science College
DHARWAD 580004